# ೪೭ನೇ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಬಹುಮಾನಿತರು ೨೦೧೭

## ೨೦೧೭ರ ಗೌರವ ಪ್ರಶಸ್ತಿ ಪುರಸ್ಕೃತರು


ಶ್ರೀ ಬಿ.ಜಿ.ಗುಜ್ಜಾರಪ್ಪ, ಬೆಂಗಳೂರು


ಶ್ರೀ ಎಂ.ಸಿ.ಚೆಟ್ಟಿ, ಹುಬ್ಬಳ್ಳಿ


ಶ್ರೀ ವಿಜಯ್ ಬಾಗೋಡಿ, ಕಲಬುರಗಿ

## ಪುಸ್ತಕ ಬಹುಮಾನ ೨೦೧೬


ಪ್ರೊ||ಎಸ್.ಸಿ.ಪಾಟೀಲ, ಬೆಂಗಳೂರು

## ಪುಸ್ತಕ ಬಹುಮಾನ ೨೦೧೭


ಡಾ.ಮಲ್ಲಿಕಾರ್ಜುನ.ಸಿ.ಬಾಗೋಡಿ, ಕಲಬುರಗಿ

## ೪೬ನೇ ವಾರ್ಷಿಕ ಕಲಾಪ್ರದರ್ಶನ ಬಹುಮಾನಿತರು


ಶ್ರೀ ಪ್ರಕಾಶ್ ಗಡ್ಕರ್
ಕಲಬುರಗಿ


ಶ್ರೀ ಚಂದ್ರಕಾಂತ ಸರೋದೆ
ಇಳಕಲ್


ಶ್ರೀ ಮಹ್ಮದ ಇಸ್ಹಾಕ ಗುಲಾಬಶಾ
ಮಕಾನದಾರ, ಬೆಳಗಾವಿ


ಶ್ರೀ ಜಿ.ಆರ್.ಮಲ್ಲಾಪೂರ
ಹುಬ್ಬಳ್ಳಿ


ಶ್ರೀ ಪಾಲಯ್ಯ.ಎನ್
ಚಿತ್ರದುರ್ಗ


ಶ್ರೀ ನರಸಿಂಹ ಗಂಟಿ
ಯಾದಗಿರಿ


ಡಾ.ಅಶೋಕ.ಎಸ್.ಶಟಗಾರ.
ಕಲಬುರಗಿ


ಶ್ರೀ ಜಯಪ್ರಕಾಶ್.ಎಂ.ಹೆಚ್
ಚಿಕ್ಕಮಗಳೂರು


ಕು.ಪೂರ್ಣಿಮ.ಎನ್
ಮಂಡ್ಯ


ಶ್ರೀ ನಿಹಾಲ್ ವಿಕ್ರಂ ರಾಜು
ಬಳ್ಳಾರಿ

## ಸುವರ್ಣ ಸಂಭ್ರಮ ಕಲಾ ಪುರಸ್ಕಾರ ವಿಶೇಷ ಬಹುಮಾನಿತರು



ಶ್ರೀ ರಂಗನಾಥ.ಡಿ.ಕೆ
ಮಹಾಲಿಂಗಪುರ



ಶ್ರೀ ವಿರೂಪಾಕ್ಷ.ಎಸ್
ಚಾಮರಾಜನಗರ



ಶ್ರೀಮತಿ ಶಾಂತಲ.ಹೆಚ್.ಪಿ
ಬೆಂಗಳೂರು



ಶ್ರೀ ಗಂಗಾಧರ.ಈ.ಬಂಡಾನವರ
ಕೊಪ್ಪಳ



ಶ್ರೀ ವೀರೇಶ.ಎಂ.ರುದ್ರಸ್ವಾಮಿ
ಬಾಗಲಕೋಟೆ



ಡಾ.ಸುಭಾಷ ಕಮ್ಮಾರ
ಬೆಳಗಾವಿ



ಶ್ರೀ ರಾಮಲಿಂಗ ಬೆಳಕೋಟೆ
ಕಲಬುರಗಿ



ಶ್ರೀ ವೀರಣ್ಣ ಕರಡಿ
ಹುಣಸೂರು



ಶ್ರೀ ಕೆ.ಎಸ್.ಪರಮೇಶ್ವರ
ಮೈಸೂರು



ಶ್ರೀ ಹೆಚ್.ಸತೀಷ್
ಬೆಂಗಳೂರು

## 2017ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರು



### ಶ್ರೀ ಬಿ. ಜಿ. ಗುಜ್ಜಾರಪ್ಪ
ತುಮಕೂರು



ರಾಜ್ಯದ ಹೆಸರಾಂತ ವ್ಯಂಗ್ಯಚಿತ್ರಕಲಾವಿದರಲ್ಲಿ ಶ್ರೀ ಜಿ. ಜಿ. ಗುಜ್ಜಾರಪ್ಪನರವರು ಒಬ್ಬರು. ಶ್ರೀಯುತರು ತುಮಕೂರಿನಲ್ಲಿ 3ನೇ ಜೂನ್ 1955ರಲ್ಲಿ ಜನಿಸಿದರು. 1978ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಷಯದ ಎಂ. ಎ. ಪದವಿಯನ್ನು ಪಡೆದವರು. ಶ್ರೀಯುತರು ಚಿತ್ರಕಲಾ ಪರಿಷತ್, ಬೆಂಗಳೂರು ಇಲ್ಲಿ ಚಿತ್ರಕಲೆಯ ಅಭ್ಯಾಸ ಮಾಡಿದರು. ತಮ್ಮ ವಿದ್ಯಾಭ್ಯಾಸದ ನಂತರದಲ್ಲಿ ವ್ಯಂಗ್ಯಚಿತ್ರ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಸುಧಾ, ಮಯೂರ ಪತ್ರಿಕೆಗಳಿಗೆ ವ್ಯಂಗ್ಯಚಿತ್ರ ರಚನೆಯಲ್ಲಿ ಕೆಲಸ ನಿರ್ವಹಿಸಿದರು. ನಂತರದಲ್ಲಿ ಲಂಕೇಶ್ ಪತ್ರಿಕೆಗೂ ಕಾರ್ಯನಿರ್ವಹಿಸಿದರು. ವಿವಿಧ ಕಾಲೇಜುಗಳಲ್ಲಿ ಪ್ರಾಧ್ಯಪಕಾರಗಿಯೂ ಕೂಡ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರ ಮಿತ ಮತ್ತು ಮ್ಯಾಜಿಕ್ ಶೋ ಎಂಬ ಮಕ್ಕಳ ಕಥೆ ಪುಸ್ತಕವನ್ನು ಬರೆದು ಅದರಲ್ಲಿ ತಮ್ಮದೇ ರಚನೆಯ ವ್ಯಂಗ್ಯಚಿತ್ರವನ್ನು ರಚಿಸಿರುತ್ತಾರೆ. ಈ ಪುಸ್ತಕವನ್ನು ನವದೆಹಲಿಯ ರಾಷ್ಟ್ರೀಯ ಪುಸ್ತಕ ಸಂಸ್ಥೆಯವರು ಮುದ್ರಿಸಿ ಪ್ರಕಟಿಸಿರುತ್ತಾರೆ. ಅಲ್ಲದೇ ಪ್ರಜಾವಾಣಿ ದಿನಪತ್ರಿಕೆಗೆ ಕ್ರೀಡಾ ವಿಷಯಕ್ಕೆ ಸಂಬಂಧಿಸಿದಂತೆ ಕಚಗುಳಿ ಎಂಬ ಶೀರ್ಷಿಕೆಯಡಿ ವ್ಯಂಗ್ಯ ಚಿತ್ರ ರಚಿಸಿಕೊಟ್ಟಿರುತ್ತಾರೆ. ಶ್ರೀಯುತರು ಬೆಂಗಳೂರು, ಕರ್ನಾಟಕ ಮಾಧ್ಯಮ ಅಕಾಡೆಮಿ, ಕಲಬುರಗಿ, ಟರ್ಕಿ, ಬೆಲ್ಜಿಯಂ, ಫ್ರಾನ್ಸ್, ಬ್ರೆಜಿಲ್, ನಾರ್ವೆ, ಆಸ್ಟ್ರೀನ್, ಕೊರಿಯಾ ಮುಂತಾದ ಕಡೆ ವ್ಯಂಗ್ಯಚಿತ್ರಕಾರರ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿರುತ್ತಾರೆ. 1984ರಲ್ಲಿ ರಾಜ್ಯ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ವಿವಿಧ ಸಂಸ್ಥೆಗಳ ಜಾಹೀರಾತು ನಿರ್ಮಾಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಶ್ರೀ ಎಂ. ಸಿ. ಚೆಟ್ಟಿ

ಹುಬ್ಬಳ್ಳಿ





ಶ್ರೀ ಎಂ. ಸಿ. ಚೆಟ್ಟಿಯವರು 1958ರಲ್ಲಿ ಜನಿಸಿದರು. ಶ್ರೀಯುತರು 1983ರಲ್ಲಿ ಡಿಪ್ಲೋಮೋ ಇನ್ ಡ್ರಾಯಿಂಗ್ ಮತ್ತು ಪೇಂಟಿಂಗ್‌ನ್ನು ಮುಗಿಸಿ 1984ರಲ್ಲಿ ಆರ್ಟ್ ಮಾಸ್ಟರ್ ಪದವಿ ಪಡೆದರು. 2002ರಲ್ಲಿ ಬಿ.ಎಫ್.ಎ.ಪದವಿಯನ್ನು ಸಹ ಪಡೆದರು. ಶ್ರೀಯುತರು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಚೆನ್ನೈ, ನಾಗಪುರ್, ಮೈಸೂರು, ಮುಂಬಯಿ, ಪುಣೆ, ಗೋವಾ, ವಿಜಯಪುರ, ಎರ್ನಾಕುಲಂ, ಬೆಳಗಾವಿ, ಇಂಗ್ಲೆಂಡ್, ಮುಂತಾದ ಕಡೆ ಸಂಘ ಸಂಸ್ಥೆಗಳು ಏರ್ಪಡಿಸಿದ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿರುತ್ತಾರೆ. ಶ್ರೀಯುತರು ರಚಿಸಿದ ಕಲಾಕೃತಿಗಳು ಸಹೃದಯರ ಮೆಚ್ಚುಗೆ ಗಳಿಸಿವೆ. ಶ್ರೀಯತರು ರಾಜ್ಯದ ವಿವಿಧ ಭಾಗಗಳಲ್ಲಿ ಹೊರ ರಾಜ್ಯಗಳಲ್ಲೂ ಕಲಾಪ್ರಾತ್ಯಕ್ಷಿಯನ್ನು ನಡೆಸಿಕೊಟ್ಟಿರುತ್ತಾರೆ. ಶ್ರೀಯುತರು ವಿವಿಧ ಏಕವ್ಯಕ್ತಿ ಪ್ರದರ್ಶನಗಳನ್ನು ವಿವಿಧ ರಾಜ್ಯಗಳಲ್ಲಿ, ವಿವಿಧ ದೇಶಗಳಲ್ಲಿ ಕಲಾಶಿಬಿರಗಳನ್ನು ಏರ್ಪಡಿಸಿ ಭಾಗವಹಿಸಿರುತ್ತಾರೆ. 1982ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ವಾರ್ಷಿಕ ಕಲಾಪ್ರದರ್ಶನ, 1983, 1984 ಮತ್ತು 1985ರಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನದಲ್ಲಿ, 1989ರಲ್ಲಿ ಆಲ್ ಇಂಡಿಯಾ ಕಲಾ ಪ್ರದರ್ಶನದ ಚಿತ್ರಕಲಾ ಪರಿಷತ್‌ನ ಪ್ರಶಸ್ತಿ ಪಡೆದಿರುತ್ತಾರೆ. ಶ್ರೀ ಎಂ.ಸಿ.ಚೆಟ್ಟಿಯವರ ಕಲಾಕೃತಿಗಳು ನವದೆಹಲಿ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ, ಮುಂಬಯಿ ಗದಗ, ದಾವಣಗೆರೆ, ಗೋವಾ ಮುಂತಾದ ಕಡೆ ಕಲಾ ಸಂಗ್ರಹಾಲಯದಲ್ಲಿದ್ದು, ಇಂದಿಗೂ ನೋಡುಗರಿಗೆ ರಸದೌತಣವನ್ನು ನೀಡುತ್ತಿವೆ.

## ಶ್ರೀ ವಿಜಯ ಬಾಗೋಡಿ

ಕಲಬುರಗಿ





ಶ್ರೀ ವಿಜಯ ಬಾಗೋಡಿಯವರು 1959ರ ಜೂನ್ 1ರಂದು ಕಲಬುರಗಿ ಜಿಲ್ಲೆಯಲ್ಲಿ ಜನಿಸಿದರು. ಶ್ರೀಯುತರು ದಿ ಐಡಿಯಲ್ ಫೈನ್ ಆರ್ಟ್ ಕಾಲೇಜು, ಕಲಬುರಗಿ ಇಲ್ಲಿ ಲಲಿತಕಲೆಯ ಪದವಿ ಪಡೆದರು. ನಂತರದಲ್ಲಿ ಗ್ರಾಫಿಕ್ ಕಲೆಯ ಪದವಿಯನ್ನು ಬರೋಡಾದ ಎಂ.ಎಸ್.ಯು ವಿಶ್ವವಿದ್ಯಾಲಯದಲ್ಲಿ ಪಡೆದರು. ಹರಿಯಾಣ, ಬಿನಾಲೆ, ಅಹಮದಾಬಾದ್, ನವದೆಹಲಿ, ಹೈದರಾಬಾದ್, ಮುಂಬಯಿ, ಬೆಂಗಳೂರು ಗುವಾಹಟಿ, ಚೆನ್ನೈ, ವಡೋದರಾ, ಜೈಪುರ್, ಗೋವಾ, ಭೋಪಾಲ್ ಮುಂತಾದ ಕಡೆ ವಿವಿಧ ಸಂಘ ಸಂಸ್ಥೆಗಳು ಏರ್ಪಡಿಸಿದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿ ಕಲಾತ್ಮಕವಾದ ಕಲಾಕೃತಿಗಳನ್ನು ರಚಿಸಿರುತ್ತಾರೆ. ಅಲ್ಲದೇ ಭೂತಾನ್, ಯುಎಸ್‌ಎ, ಬೀಜಿಂಗ್, ಬ್ಯಾಂಕಾಕ್, ಫ್ರಾನ್ಸ್, ಹಂಗೇರಿಯಾ, ಇಂಡೋನೇಷಿಯಾ, ಬಾಂಗ್ಲಾದೇಶ, ಜರ್ಮನಿ, ಸ್ಲೋವೇನಿಯಾ ದೇಶಗಳಲ್ಲಿಯೂ ತಮ್ಮ ಕಲಾ ನೈಪುಣ್ಯತೆಯನ್ನು ಪ್ರದರ್ಶಿಸಿರುತ್ತಾರೆ. ಶ್ರೀಯುತರು ವಿವಿಧ ಏಕವ್ಯಕ್ತಿ ಪ್ರದರ್ಶನಗಳನ್ನು ವಿವಿಧ ರಾಜ್ಯಗಳಲ್ಲಿ, ವಿವಿಧ ದೇಶಗಳಲ್ಲಿ ಕಲಾಶಿಬಿರಗಳನ್ನು ಏರ್ಪಡಿಸಿ ಭಾಗವಹಿಸಿರುತ್ತಾರೆ. ಶ್ರೀಯತರು ಮೈಸೂರು ದಸರಾ, ಭೂಪಾಲ್‌ನ ಬಿನಾಲೆ, ಎಐಎಫ್‌ಎಸಿಎಸ್ ನವದೆಹಲಿ, 1983 ಮತ್ತು 1987ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ವಾರ್ಷಿಕ ಕಲಾಪ್ರದರ್ಶನ, 1995ರಲ್ಲಿ ರಜತಮಹೋತ್ಸವದ ಅಂಗವಾಗಿ ಕಲಾವಿದರ ಗೌರವ ವಿಶೇಷ ಪ್ರಶಸ್ತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಮುಂತಾದವುಗಳ ಪ್ರಶಸ್ತಿಗಳು, ಅಲ್ಲದೇ ಬರೋಡಾದ ಎಂ.ಎಸ್.ಯುನ ಸ್ಕಾಲರ್‌ಶಿಪ್‌ನ್ನು ಸಹ ಪಡೆದಿರುತ್ತಾರೆ. ಅದಲ್ಲದೇ ದೇಶದ ವಿವಿಧ ವಿಶ್ವವಿದ್ಯಾಲಯಗಳಿಗೆ ಬೋರ್ಡ್ ಆಫ್ ಸ್ಟಡೀಸ್‌ನ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ವಿವಿಧ ಸಂಘ ಸಂಸ್ಥೆಗಳ ಸಲಹೆಗಾರರಾಗಿಯೂ ಶ್ರೀಯುತರು ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತದಲ್ಲಿ ಎಂ.ಎಸ್.ಯು ವಿಶ್ವವಿದ್ಯಾಲಯದ ಗ್ರಾಫಿಕ್ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.